ದಸ್ತೈವಜಿನ ನಂಬರ್.	ದಸ್ತೈವಜನ್ನು ಹಾಜರು ಮಾಡಿದ ತಾರೀಖು.	ದಸ್ತೈವಜನ್ನು ರಿಜಿಸ್ಟರ್ ಮಾಡಬೇಕೆಂದು ಹುಕುಮಾದ ತಾರೀಖು.	ದಸ್ತೈವಜನ್ನು ರಿಜಿಸ್ಟರ್ ಮಾಡಿದ ತಾರೀಖು.	ದಸ್ತೈವಜನ್ನು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
104 1885—86	20—3—1885	4—7—1885	4—7—1885	ಕುಣಿಗಲ್‌ನಲ್ಲಿರುವ ಸಿದ್ದಪ್ಪನವರ ಮಗ ಗಂಗಯ್ಯ	ತುಮಕೂರು ತಾಲ್ಲೂಕು ಹೆಬ್ಬೂರು ಈಸಬಾಗ್ರಾಮದಲ್ಲಿ ಯಿರುವ ಪುಟ್ಟಣ್ಣನ ಮಗ ರಂಗಪ್ಪನಿಗೆ	ಹೆಬ್ಬೂರು ಬಳಿ ಸರ್ವೆ ನಂಬರು 123 ಯಲ್ಲಿ ಕರೆ 3—37 ಆಕಾರ 4—12—0 ವುಳ್ಳ ಹಿಪ್ಪೆಮರದ ತೋಪನ್ನು 95—0—0 ರೂ ಪಾಯಿಗೆ ಅನ್ಯಾದಿ ಮಾಡಿರುವದಾಗಿಯೂ ಮೂಲ ಕರ್ತನಿಂದ ವೊಬಳಗು ಪಾವತಿ ಆಗುವವರಿಗೂ ಸ್ಥಿತಿ ಅನುಭವಿಸಿಕೊಂಡು ಬರುವದೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 284.

ಮೃತಪಟ್ಟ ಶ್ಯಾಮಶಿಂಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1 ಕೃಷ್ಣಾಬಾಯಿ 2 ಲಕ್ಷ್ಮಾಬಾಯಿ, ಮೃತಪಟ್ಟ ಸದರೀ ಶ್ಯಾಮಶಿಂಗರಿಗೆ 1ನೇ ಹೆಂಡತಿ 2ನೇ ಸೊಸೆ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಕೃಷ್ಣಾಬಾಯಿ ಲಕ್ಷ್ಮಾಬಾಯಿರು ಸದರೀ ವಾಸಸ್ಥರಾಗಿ ಮೃತಪಟ್ಟ ಶ್ಯಾಮಶಿಂಗರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಕೃಷ್ಣಾಬಾಯಿ 2ನೇ ಲಕ್ಷ್ಮಾಬಾಯಿ ಅರ್ಜೀಯನ್ನ 1887ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ನಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ಯಾಮಶಿಂಗರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 285.

ಮೃತಪಟ್ಟ ಬೆಟ್ಟನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ದಾಸನು ಮೃತಪಟ್ಟ ಸದರೀ ಬೆಟ್ಟನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ದೊಡ್ಡೇಗೌಡನ ಕೊಪ್ಪಲು ಸ್ಥಳದ ಸದರೀ ದಾಸನು ಸದರೀ ವಾಸಸ್ಥರಾಗಿ ಮೃತಪಟ್ಟ ಬೆಟ್ಟನ ಜಿಂದಗಿ ಬಗ್ಯಾಗಿ ಬರತಕ್ಕ 50 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ದಾಸನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ನಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಟ್ಟನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜುಲೈ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ವೊಹರ್‌ಸಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.